ವಿಜಯ ಕರ್ನಾಟಕ

# ಬ್ಯಾಸ್ಕೆಟ್‌ಬಾಲ್‌ನ ಚತುರ ತಾರೆಗಳಿವರು...

■ ಸಂದೀಪ್ ದುಗಡಿಹಳ್ಳಿ ಬೆಂಗಳೂರು

ಬ್ಯಾಸ್ಕೆಟ್‌ಬಾಲ್ ಅಂಗಳದಲ್ಲಿ ಮಿಂಚುತ್ತಿರುವ ನಾಲ್ಕು ತಾರೆಗಳು ಈಗ ರಾಜ್ಯಕ್ಕೆ ಹೆಮ್ಮೆಯ ಗರಿ ಮೂಡುವಂತೆ ಮಾಡಿದ್ದು ವಿಶೇಷ. ಚೆಂಡನ್ನು ನಿಯಂತ್ರಿಸಿ ತಮ್ಮ ತಮ್ಮ ಕ್ಷೇತ್ರದಲ್ಲಿ ಚುರುಕಿನ ಚಲನೆಯಿಂದ ಹೊಳೆಯುತ್ತಿರುವ ಕನ್ನಡ ನಾಡಿನ ಈ ಯುವ ಆಟಗಾರರ ಆಟ ನೋಡುವುದೇ ಸೊಗಸು.

ಕಿರಿಯರ ವಿಭಾಗವೂ ಸೇರಿದಂತೆ ರಾಜ್ಯ ವಿವಿಧ ವಯೋವರ್ಗದ ತಂಡಗಳಲ್ಲಿ ಸ್ಥಾನ ಪಡೆದು ಮಿಂಚಿರುವ ಋಷೀಕೇಶ್, ಚೇತನ್ ಸುರೇಶ್, ವಿಶು.ಪಿ ಮತ್ತು ಯಶಸ್ ಅವರು ಬೆಂಗಳೂರಿನ ವಿಶ್ವೇಶ್ವರಪುರಂನ ಶ್ರೀ ಭಗವಾನ್ ಮಹಾವೀರ ಜೈನ್ ಪಿಯು ಕಾಲೇಜಿನ ವಿದ್ಯಾರ್ಥಿಗಳು. ರಾಜ್ಯ ಹಾಗೂ ರಾಷ್ಟ್ರ ಕ್ರೀಡಾಂಗಣಕ್ಕೆ ಹತ್ತು ಹಲವು ಕ್ರೀಡಾ ಪ್ರತಿಭೆಗಳನ್ನು ನೀಡುತ್ತಲೇ ಬಂದಿರುವ ಈ ಕಾಲೇಜಿನ ಮಾತ್ರವಲ್ಲ,ರಾಜ್ಯದ ಕೀರ್ತಿ ಪತಾಕೆಯನ್ನು ಈ ನಾಲ್ವರೂ ಮುಗಿಲೆತ್ತರಕ್ಕೆ ಹಾರಿಸಿದ್ದಾರೆ.

ಈ ನಾಲ್ವರೂ ಮೊದಲ ವರ್ಷದ ಬಿ. ಕಾಂ. ಪದವಿ ವ್ಯಾಸಂಗ ಮಾಡುತ್ತಿದ್ದು, ಇತ್ತೀಚೆಗೆ ಹೈದರಾಬಾದ್‌ನಲ್ಲಿ ನಡೆದ ದಕ್ಷಿಣ ಭಾರತದ ಅಗ್ರ ಎಂಟು ತಂಡಗಳು ಆಡುವ ದಕ್ಷಿಣ ವಲಯ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ಗಮನ ಸೆಳೆದಿದ್ದಾರೆ. ಈ ಪೈಕಿ ಚೇತನ್ ಸುರೇಶ್ ಮತ್ತು ಋಷೀಕೇಶ್ ಸಹೋದರ ಸಂಬಂಧಿಗಳಾಗಿದ್ದು ಚಿಕ್ಕಬಳ್ಳಾಪುರದ ಮೂಲದ ಪ್ರತಿಭೆಗಳು. ಬೆಂಗಳೂರಿನಲ್ಲಿಯೇ ವ್ಯಾಸಂಗ ಮಾಡಿದ್ದಾರೆ. ಯಶಸ್ ಬೆಂಗಳೂರಿನವರು. ವಿಶು ಪಳನಿ ಪರಮೇಶ್ ತಮಿಳುನಾಡಿನಿಂದ ಬಂದು ಇಲ್ಲಿ ನೆಲೆಸಿದವರು.

ಚಿಕ್ಕಂದಿನಲ್ಲೇ ಬ್ಯಾಸ್ಕೆಟ್‌ಬಾಲ್ ಕ್ರೀಡೆಯತ್ತ ಆಕರ್ಷಿತರಾದ ಇವರು ಕೋಚ್ ಪುನೀತ್ ಸುರೇಶ್ ಅವರ ಗರಡಿಯಲ್ಲಿ ಪಳಗಿದ್ದಾರೆ. ಋಷೀಕೇಶ್ ಅವರು ಸೆಂಟ್ರಲ್ ಪೊಸಿಷನ್‌ನಲ್ಲಿ ಉತ್ತಮ ಆಟಗಾರ ಎನಿಸಿದ್ದರೆ, ಚೇತನ್ ಸುರೇಶ್ ಮತ್ತು ಯಶಸ್ ಅವರು ಮುನ್ಪಡೆ ಆಟಗಾರರಾಗಿ ಯಶಸ್ಸು ಸಾಧಿಸುತ್ತಿದ್ದಾರೆ. ವಿಶು. ಪಿ. ಬಾಲ್ ಹ್ಯಾಂಡ್ಲರ್ ಪೊಸಿಷನ್‌ನಲ್ಲಿ ಪಳಗುತ್ತಿದ್ದಾರೆ.

ಇವರ ಪೈಕಿ ಋಷೀಕೇಶ್ 19 ವರ್ಷದೊಳಗಿನವರ ಕಿರಿಯರ ರಾಷ್ಟ್ರೀಯ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದಾರೆ. ಚೇತನ್ ಸುರೇಶ್ ಕೂಡ ಹೈದರಾಬಾದ್‌ನಲ್ಲಿ ನಡೆದ ಸೀನಿಯರ್ ದಕ್ಷಿಣ ವಲಯ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ರಾಜ್ಯ ತಂಡದ ಪರ ಆಡಿದ್ದಾರೆ. ಯಶಸ್ ಅವರು 13, 16, 18 ವರ್ಷದೊಳಗಿನವರ ಟೂರ್ನಿ ಹಾಗೂ ಸೀನಿಯರ್ ರಾಷ್ಟ್ರೀಯ ಟೂರ್ನಿಯಲ್ಲೂ ರಾಜ್ಯದ ಪರ ಆಡಿ ಮಿಂಚಿದ್ದಾರೆ.

ವಿಶು. ಪಿ. ಕಳೆದ ವರ್ಷ, 18 ವರ್ಷದೊಳಗಿನವರ ಕಿರಿಯರ ರಾಷ್ಟ್ರೀಯ ಟೂರ್ನಿಯಲ್ಲಿ ಆಡಿದ್ದರು. ಈ ಕ್ರೀಡಾ ಪ್ರತಿಭೆಗಳೆಲ್ಲರೂ ಮಧ್ಯಮ ವರ್ಗದಿಂದ ಬಂದವರಾಗಿದ್ದು, ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪೋಷಕರು ಹಿಂದೆ ಬಿದ್ದಿಲ್ಲ. ಋಷೀಕೇಶ್ ತಂದೆ ಬಾಪು ನಾಯ್ಡು ಈಗಿಲ್ಲ. ಆದರೆ ತಾಯಿ ಬೇಬಿ.ಕೆ.ಎಂ. ಅವರ ನಿರಂತರ ಪ್ರೋತ್ಸಾಹ ಮಗನಿಗಿದೆ. ಯಶಸ್ ತಂದೆ ಎಸ್.ರಮೇಶ್ ಈಗಿಲ್ಲ. ಜೀವ ವಿಮಾ ಪ್ರತಿನಿಧಿಯಾಗಿರುವ ತಾಯಿ ಧನಲಕ್ಷ್ಮೀ ಅವರು ಮಗನ ಕ್ರೀಡಾ ಪ್ರತಿಭೆಗೆ ನೀರೆರೆದು ಪೋಷಿಸುತ್ತಿದ್ದಾರೆ.

ಚೇತನ್ ಕುಮಾರ್ ತಂದೆ ಸುರೇಶ್ ವೃತ್ತಿಯಲ್ಲಿ ವ್ಯಾಪಾರಿಯಾಗಿದ್ದು, ತಾಯಿ ಮೀನಾಕ್ಷಿ ಗೃಹಿಣಿ. ವಿಶು ತಂದೆ ಪಳನಿ ಪರಮೇಶ್ ಮತ್ತು ತಾಯಿ ಇಂದಿರಾ ತಮಿಳುನಾಡಿನಲ್ಲಿ ವಾಸವಾಗಿದ್ದರೂ, ಕರ್ನಾಟಕದಲ್ಲಿ ಓದುತ್ತಿರುವ ಮಗನಿಗೆ ನಿರಂತರ ಪ್ರೋತ್ಸಾಹ ನೀಡುತ್ತಿದ್ದಾರೆ.

ವಿಕ ಚಿತ್ರಲೋಕ



ರಾಜ್ಯ ಬ್ಯಾಸ್ಕೆಟ್‌ಬಾಲ್‌ನಲ್ಲಿ ಮಿಂಚುತ್ತಿರುವ (ಎಡದಿಂದ ಬಲಕ್ಕೆ) ಋಷೀಕೇಶ್, ಚೇತನ್ ಕುಮಾರ್, ವಿಶು. ಪಿ ಮತ್ತು ಯಶಸ್.